**Andolana**

**Date:** August 19, 2015 **Page No.** 02

**Edition:** Mysore **Language: Kannada**

# ಐಎಎಸ್ ಅಧಿಕಾರಿಯಾದರೆ ಜನ ಸೇವೆಗೆ ಅವಕಾಶ

## ಎಸ್‌ಡಿಎಂ ಸಂಸ್ಥಾಪನಾ ದಿನಾಚರಣೆಯಲ್ಲಿ ವಿವೇಕ್ ಕುಲಕರ್ಣಿ



ಮೈಸೂರು,ಆ.೧೮– ಐಎಎಸ್ ಅಧಿಕಾರಿಯಾದರೆ ಗ್ರಾಮೀಣ ಹಾಗೂ ಬಡ ಜನರ ಸೇವೆ ಮಾಡುವಂತಹ ಅತ್ಯುತ್ತಮ ಅವಕಾಶ ಒದಗುತ್ತದೆ ಎಂದು ನಿವೃತ್ತ ಐಎಎಸ್ ಅಧಿಕಾರಿ ವಿವೇಕ್ ಕುಲಕರ್ಣಿ ಹೇಳಿದರು.

ಮಂಗಳವಾರ ನಗರದ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ನಡೆದ ಸಂಸ್ಥಾಪನ ದಿನಾಚರಣೆಯಲ್ಲಿ ಮಾತನಾಡಿದ ಅವರು,

ಐಎಎಸ್ ಅಧಿಕಾರಿಗಳಾದರೆ ರಾಜಕಾರಣಿಗಳಿಂದ ತೊಂದರೆ ಅನುಭವಿಸಬೇಕಾಗುತ್ತದೆ ಎಂಬ ಮಾತಿದೆ. ಅದು ತಪ್ಪು ಕಲ್ಪನೆ. ಐಎಎಸ್ ಅಧಿಕಾರಿಗಳು ನೇರವಾಗಿ ರಾಷ್ಟ್ರಪತಿಗಳಿಂದ ನೇಮಕಗೊಂಡಿರುತ್ತಾರೆ. ಅವರನ್ನು ಕೆಲಸದಿಂದ ತೆಗೆಯುವ ಅಧಿಕಾರ ಯಾರಿಗೂ ಇಲ್ಲ. ಹೆಚ್ಚೆಂದರೆ ನಮ್ಮ ಕೆಲಸ ಮಾಡಿಕೊಡಲಿಲ್ಲ ಎಂಬ ಕಾರಣಕ್ಕಾಗಿ ವರ್ಗಾವಣೆ ಮಾಡಬಹುದಷ್ಟೇ ಎಂದು ಹೇಳಿದರು.

ಎಸ್‌ಡಿಎಂ–ಐಎಂಡಿ ನಿರ್ದೇಶಕ ಡಾ.ಎನ್.ಪರಶುರಾಮನ್, ಉಪ ನಿರ್ದೇಶಕರಾದ ಡಾ.ಹೆಚ್.ಗಾಯತ್ರಿ, ಪ್ರೊ.ಎಂ.ಆರ್.ಸುರೇಶ್ ಮತ್ತಿತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.